# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕಃ 17.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ-ವಾದಿ ಪರ ವಕೀಲರಾದ ಶ್ರೀ. ಎನ್ ಆರ್ ಸಿ ರವರಿಂದ

ವಾದಿ ಗೊತ್ತಾ ಎಂದರೆ ಗೊತ್ತು ಎಂದು ನುಡಿಯುತ್ತಾರೆ. ವಾದಿಯು ನಿಮ್ಮ ಮತ್ತು ಇತರ ಪ್ರತಿವಾದಿಯರ ವಿರುದ್ಧ ಯಾವ ಉದ್ದೇಶಕ್ಕೆ ದಾವಾ ಹಾಕಿದ್ದಾರೆ ಎಂದು ಗೊತ್ತಾ ಎಂದರೆ ಓಣಿಯ ವಿಚಾರಕ್ಕೆ ಹಾಕಿರಬಹುದು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಇ–ಖಾತಾ ಆಗಿರುತ್ತದೆ ಎಂದರೆ ಸರಿ. ವಾದಿಯು ದಾವಾ ಅನುಸೂಚಿಯ 9.14x7.62 ಮೀಟರ್ ನಲ್ಲಿ ಸುತ್ತಲೂ ಜಾಗ ಬಿಟ್ಟು ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಅವರ ಮನೆ ಇಲ್ಲವಾ ಎಂದರೆ ಸಾಕ್ಷಿಯು ಇದೆ ಎಂದು ನುಡಿಯುತ್ತಾರೆ. ವಾದಿಯು ಮಂಡಳ ಪಂಚಾಯಿತಿಯಿಂದ ಮನೆ ಕಟ್ಟಲು license ಪಡೆದುಕೊಂಡು ಮನೆ ಕಟ್ಟಿಕೊಂಡು ವಾಸವಾಗಿದ್ದರೂ ಕೂಡ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತನ್ನು ವಾದಿಯು ದಿಃ 04.08.2009 ರಂದು ರಾಜಣ್ಣ ರವರಿಂದ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ಕಂದಾಯವನ್ನು ಪಾವತಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಮನೆಯ ಪಕ್ಕ Power line ಹಾದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಮನೆಯ ಪಕ್ಕ ಯಾವುದೇ power line ಹೋಗಿಲ್ಲ ಎಂದರೆ ಅವರ ಮನೆಯ ಮೇಲೆಯೇ ಹಾದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ

ಮತ್ತು ವಾದಿಯ ಮನೆ ಅಕ್ಕಪಕ್ಕದಲ್ಲಿ ಇರುತ್ತವೆ ಎಂದರೆ ಸರಿ. ನೀವು ಮನೆ ಕಟ್ಟುವ ಮೊದಲೇ ವಾದಿಯು ತನ್ನ ಅರ್ ಸಿ ಸಿ ಮನೆಯನ್ನು ಕಟ್ಟಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 30 ವರ್ಷಗಳ ಹಿಂದೆಯೇ ಮನೆ ಕಟ್ಟಿದ್ದೇನು ಎಂದು ನುಡಿಯುತ್ತಾರೆ. ನೀವು 30 ವರ್ಷಗಳ ಹಿಂದೆ ಎಂತಹ ಮನೆಯನ್ನು ಕಟ್ಟಿದ್ದೀರಿ ಎಂದರೆ ಅಂಚಿನ ಮನೆಯನ್ನು ಕಟ್ಟಿದ್ದೇನು ಎಂದು ನುಡಿಯುತ್ತಾರೆ. ಈಗ ನಿಮ್ಮ ಎಂತಹ ಮನೆ ಇರುತ್ತದೆ ಎಂದರೆ mould ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಎಷ್ಟು ಅಂತಸ್ತಿನ ಮನೆ ಇರುತ್ತದೆ ಎಂದರೆ ಸಾಕ್ಷಿಯು 2 ಅಂತಸ್ತಿನ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯ ಮನೆಯ ದಕ್ಷಿಣಕ್ಕೆ ಓಣಿ ಬಿಟ್ಟು ನಿಮ್ಮ ಮನೆ ಬರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸದರಿ ಓಣಿ ನಮ್ಮದು ಎಂದು ನುಡಿಯುತ್ತಾರೆ. ಸದರಿ ಓಣಿ ನಿಮ್ಮದು ಎಂದು ತೋರಿಸುವ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಆ ರೀತಿಯ ಯಾವುದೇ ದಾಖಲಾತಿಯನ್ನು ಹಾಜರುಪಡಿಸದೇ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

2. ವಾದಿಯು ದಾವಾ ಅನುಸೂಚಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟುವಾಗ ತನ್ನ ದಕ್ಷಿಣ ದಿಕ್ಕಿನಲ್ಲಿ ತಾವು ಮತ್ತು ತಮ್ಮ ಕುಟುಂಬದ ಸದಸ್ಯರು ಓಡಾಡುವ ಉದ್ದೇಶದಿಂದ 4 ಅಡಿ ಓಣಿಯನ್ನು ಬಿಟ್ಟಿದ್ದರು ಎಂದರೆ ಸಾಕ್ಷಿಯು ಸರ್ಕಾರದಿಂದ ನಮಗೆ ಕೊಟ್ಟಿದ್ದ 20x24 ವಿಸ್ತೀರ್ಣದಲ್ಲಿ ನಮ್ಮ ಮನೆಯ ಉತ್ತರ ದಿಕ್ಕಿಗೆ 4 ಅಡಿ ಓಣಿಯನ್ನು ನಾನು ಬಿಟ್ಟಿದ್ದೇನೆ ಎಂದು ನುಡಿಯುತ್ತಾರೆ. ವಾದಿಯರು ಬಿಟ್ಟಿದ್ದ 4 ಅಡಿ ಓಣಿಯನ್ನು ಒತ್ತುವರಿ ಮಾಡಿ compound ನಿರ್ಮಾಣ ಮಾಡಲು ನೀವು ಪ್ರಯತ್ನ ಪಟ್ಟಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ವಾದಿಯು ತನ್ನ ಮನೆಯ ದಕ್ಷಿಣಕ್ಕೆ compound ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ನೀವು ಓಣಿಯನ್ನು ಒತ್ತುವರಿ ಮಾಡಲು ಪ್ರಯತ್ನಿಸಿದಾಗ ವಾದಿಯು ನಿಮ್ಮ ವಿರುದ್ಧ ಗುಬ್ಬಿ ಪೋಲೀಸ್ ಠಾಣೆಗೆ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ವಾದಿಯು ತನ್ನ ದಕ್ಷಿಣ ದಿಕ್ಕಿಗೆ

compound ನಿರ್ಮಾಣ ಮಾಡಿದ್ದಾರೆ ಎಂದು ತೋರಿಸುವ ಫೋಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಮನೆಯ ದಕ್ಷಿಣಕ್ಕೆ 4 ಅಡಿ ಓಣಿ ಖಾಲಿ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಮನೆಯ ಉತ್ತರ ದಿಕ್ಕಿಗೆ 2 ಅಡಿ ಓಣಿ ಖಾಲಿ ಇರುತ್ತದೆ ಉತ್ತರ ದಕ್ಷಿಣ 19 ಅಡಿ ಮನೆ ನಿರ್ಮಾಣ ಮಾಡಿದ್ದು ಸದರಿ ಓಣಿಯನ್ನು ನಾವೇ ಬಿಟ್ಟುಕೊಂಡಿರುತ್ತೇವೆ. ವಾದಿಯು ತನ್ನ ದಕ್ಷಿಣ ದಿಕ್ಕಿಗೆ ಬಿಟ್ಟುಕೊಂಡಿದ್ದ ಓಣಿಗೆ ನೀವು ಕಸ ಕಡ್ಡಿಯನ್ನು ಹಾಕಿ ವಾದಿಯರು ಓಡಾಡುದಂತೆ ತೊಂದರೆ ನೀಡಿರುತ್ತೀರಿ ಎಂದರೆ ಸಾಕ್ಷಿಯು ವಾದಿಯ ಮನೆಯ ದಕ್ಷಿಣ ದಿಕ್ಕಿಗೆ ಅವರು ಓಡಾಡಲು 2 ಅಡಿ ಬಿಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ವಾದಿಯ ಮನೆಯ ನಡುವೆ ಖಾಲಿ ಓಣಿ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಮತ್ತು ವಾದಿಯ ಮನೆಯ ನಡುವೆ 1 ಮುಕ್ಕಾಲು 2 ಅಡಿ ಖಾಲಿ ಇರುತ್ತದೆ ಅಲ್ಲಿ ಯಾವುದೇ compound ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಪಂಚಾಯಿತಿಯಿಂದ ಮಂಜೂರಾಗಿರುತ್ತದೆ ಎಂದು ಹೇಳಿದ ಹಕ್ಕು ಪತ್ರದಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಮಂಜೂರು ಮಾಡುತ್ತಿರುವುದಾಗಿ ವಿಸ್ತೀರ್ಣ ನಮೂದು ಮಾಡಿದ್ದಾರಾ ಎಂದರೆ ಸಾಕ್ಷಿಯು 20x24 ಅಡಿ ಎಂದು ಬರೆದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಾಗವನ್ನು ಮಂಜೂರು ಮಾಡಿಕೊಂಡುವಂತೆ ನೀವು ಮಂಡಲ ಪಂಚಾಯಿತಿಗೆ ಅರ್ಜಿಯನ್ನು ನೀಡಿದ್ದೀರಾ ಎಂದರೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಿಮಗೆ ಮಂಜೂರು ಮಾಡುವ ಮೊದಲು ಸಭಾ ನಡವಳಿಕೆ ಆಗಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸ.ನಂ.83 ರಲ್ಲಿ ಒಟ್ಟು ಎಷ್ಟು ನಿವೇಶನಗಳನ್ನು ಮಾಡಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಸುಮಾರು 30 ನಿವೇಶನಗಳನ್ನು ಮಾಡಿದ್ದರು ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ನಿಡಿ.1 ರ ಹಕ್ಕು ಪತ್ರದಲ್ಲಿ ಉತ್ತರಕ್ಕೆ ಸೈಟ್ ನ೦.87 ಎಂದು ನಮೂದು ಆಗಿರುವ ನಂತರ ತಿದ್ದುಪಡಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ: 87/1 ನಿಮ್ಮದಲ್ಲ ಎಂದರೆ ಸರಿಯಲ್ಲ. ಹಕ್ಕು ಪತ್ರದ ಆಧಾರದ

ಮೇಲೆ ನಿಮ್ಮ ಹೆಸರಿಗೆ ಪಂಚಾಯಿತಿಯಲ್ಲಿ ದಾಖಲಾತಿಗಳು ಆಗಿರುತ್ತವಾ ಎಂದರೆ ಸಾಕ್ಷಿಯು ಖಾತೆ ಮಾಡಿಸಿದ್ದೇವೆ ಎಂದು ನುಡಿಯುತ್ತಾರೆ. ನಿಡಿ.1 ರ ದಾಖಲಾತಿ ಮತ್ತು ನಿಡಿ.2 ರ ಪಂಚಾಯಿತಿ ರವರು ನೀಡಿರುವ ದೃಢೀಕರಣ ಪತ್ರದಲ್ಲಿ ವಿಸ್ತೀರ್ಣ ಮತ್ತು ಚಕ್ಕುಬಂದಿ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ನಾನು ಮನೆ ಕಟ್ಟಿರುವ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ನಿಡಿ.2 ರ ದೃಢೀಕರಣ ಪತ್ರವನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ನೀವು ಎಷ್ಟು ವಿಸ್ತೀರ್ಣದಲ್ಲಿ ಮನೆ ಕಟ್ಟಿದ್ದೀರಿ ಎಂದು ನಿಡಿ.2 ಪತ್ರದಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಾವನ್ನು ಸಲ್ಲಿಸಿದ ನಂತರ ನಿಡಿ.2 ರ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡು ಪಂಚಾಯಿತಿಯಿಂದ ಬರೆಸಿಕೊಂಡು ಬಂದಿದ್ದೀರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ನೀಡಲಾಯಿತು.**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌7 ಸಿ.,
ಗುಬ್ಬಿ

Pw1 present he is  cross examined by defendant counsel fully .

Defendant counsel prays time for cross of Pw2.

Call on.25.11.2024.